

ಅದಮ್ಯ ಚೇತನ ಹಾಗೂ

ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್

ಸಹಭಾಗಿತ್ವದಲ್ಲಿ

## ಸರ್ಕಾರಿ ಶಾಲಾ ಮಕ್ಕಳಿಗೆ

# "ಅನ್ನಪೂರ್ಣ ಬೆಳಗಿನ ಉಪಾಹಾರ ಯೋಜನೆ"

# ಉದ್ಘಾಟನೆ ಕಾರ್ಯಕ್ರಮ

**ಸ್ಥಳ : ಕಲಬುರ್ಗಿ, ಕರ್ನಾಟಕ**

SRI SATHYA SAI
ANNAPOORNA
LET NO CHILD GO TO SCHOOL HUNGRY EVER

ಅದಮ್ಯ ಚೇತನ
ಶ್ರೀಮತಿ ಗಿರಿಜಾ ಶಾಸ್ತ್ರಿ ಸ್ಮಾರಕ ಸಂಸ್ಥೆ (ರಿ)
ಅನ್ನ । ಅಕ್ಷರ । ಆರೋಗ್ಯ
ಶ್ರೀ ಅನಂತಕುಮಾರ್
ಸಂಸ್ಥಾಪಕರು, ಅದಮ್ಯ ಚೇತನ

ADAMYA CHETANA
Smt. Girija Shastry Memorial Trust (R)
ANNA | AKSHARA | AAROGYA
Shri AnanthKumar
Founder, Adamya Chetana

ಶ್ರೀ ಸತ್ಯ ಸಾಯಿ ಅನ್ನಪೂರ್ಣ ಸಂಸ್ಥೆಯು ಯಾವುದೇ ಮಗು ಹಸಿವಿನಿಂದ ಶಾಲೆಗೆ ಹೋಗಬಾರದು ಎಂಬ ಧ್ಯೇಯವನ್ನಿಟ್ಟುಕೊಂಡು ಈ ಯೋಜನೆಯನ್ನು ರೂಪಿಸುತ್ತಿದೆ. “ ಹಲವಾರು ಶಾಲಾ ಮಕ್ಕಳು ಬೆಳಗಿನ ಹೊತ್ತು ಸರಿಯಾದ ಉಪಾಹಾರವಿಲ್ಲದೇ ಶಾಲೆಗೆ ಹೋಗುವ ಪರಿಸ್ಥಿತಿ ಇದೆ. ಖಾಲಿ ಹೊಟ್ಟೆಯಲ್ಲಿ ಅವರು ಪಾಠವನ್ನು ಕಲಿಯುವುದಾದರೂ ಹೇಗೆ? ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಹೀಗಾಗಿ ಅವರನ್ನು ಸಣ್ಣ ವಯಸ್ಸಿನಿಂದಲೇ ಸರಿಯಾಗಿ ಪೋಷಿಸುವುದು ನಮ್ಮಕರ್ತವ್ಯ. ಯಾವ ಮನೆಗಳಲ್ಲಿ ಮಕ್ಕಳಿಗೆ ಸರಿಯಾದ ಉಪಾಹಾರವನ್ನು ನೀಡಲು ಸಾಧ್ಯವಾಗುತ್ತಿಲ್ಲವೋ ಅಥವಾ ಅಂತಹ ಶಕ್ತಿ ಆ ಕುಟುಂಬಕ್ಕೆ ಇಲ್ಲವೋ ಅಂತಹ ಮಕ್ಕಳು ಶಾಲೆಗೆ ಉಪವಾಸ ಹೋಗಬಾರದು. ಹಾಗಾದಲ್ಲಿ ಅದು ಮಕ್ಕಳ ಮೇಲೆ ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕವಾಗಿ ದುಷ್ಪರಿಣಾಮ ಉಚಿಟುಮಾಡುತ್ತದೆ.”

ಭಗವನ್ ಶ್ರೀ ಸತ್ಯ ಸಾಯಿ ಬಾಬಾ ಅವರು ತಮ್ಮ ಮಾರ್ಗದರ್ಶನದಲ್ಲಿ ಏಪ್ರಿಲ್ 15, 2012 ರಂದು ತಮ್ಮ ಪ್ರೇರಕ ಶಕ್ತಿ ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಮೂಲಕ ಆರಂಭಿಸಲಾದ ಯೋಜನೆ.



## ಸದ್ಗುರು ಶ್ರೀ ಮಧುಸೂದನ ಸಾಯಿ

**ಸಂಸ್ಥಾಪಕರು ಹಾಗೂ ಟ್ರಸ್ಟಿಗಳು**

**ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್**

ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ
ದಿವ್ಯ ಆಶೀರ್ವಾದಗಳೊಂದಿಗೆ ಹಾಗು
ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಘನ ಉಪಸ್ಥಿತಿಯಲ್ಲಿ

ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ , ಅದಮ್ಯ ಚೇತನ
(ಶ್ರೀಮತಿ ಗಿರಿಜಾ ಶಾಸ್ತ್ರೀ ಸ್ಮಾರಕ ಟ್ರಸ್ಟ್) ಸಂಸ್ಥೆಯ ಸಹಯೋಗದಲ್ಲಿ
"ಕಲಬುರ್ಗಿಯಲ್ಲಿ ಸರ್ಕಾರಿ ಶಾಲೆಯ 10,000 ಮಕ್ಕಳಿಗೆ ದೈನಂದಿನ ಬೆಳಗಿನ
ಉಪಾಹಾರ ನೀಡುವ ಯೋಜನೆ" ಯನ್ನು ಆರಂಭಿಸುತ್ತಿದೆ.

**ದಿನಾಂಕ : 28 ಸೆಪ್ಟೆಂಬರ್, 2019 ರ ಶನಿವಾರ ಸಮಯ : ಬೆಳಗ್ಗೆ 9 ಗಂಟೆ**

ಮುಖ್ಯ ಅತಿಥಿಗಳು

**ಶ್ರೀ ಸುರೇಶ್ ಕುಮಾರ್**

( ಕರ್ನಾಟಕ ಸರ್ಕಾರದ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಗೌರವಾನ್ವಿತ ಅತಿಥಿಗಳು:

**ಶ್ರೀ ಉಮೇಶ್ ಜಿ ಜಾಧವ್**
ಸಂಸತ್ ಸದಸ್ಯರು, ಕಲಬುರ್ಗಿ

ಶ್ರೀ ಬಸವರಾಜ್ ಮತ್ತಿಮೂಡ್, ಶಾಸಕರು
ಶ್ರೀ ರಾಜಕುಮಾರ್ ತೆಲ್ಕೂರ್, ಶಾಸಕರು
ಶ್ರೀ ಅವಿನಾಶ್ ಜಿ. ಜಾಧವ್, ಶಾಸಕರು

ಶ್ರೀ ದತ್ತಾತ್ರೇಯ ಸಿ. ಪಾಟೀಲ್, ಶಾಸಕರು
ಶ್ರೀ ಸುಭಾಷ್ ಗುತ್ತೇದಾರ್, ಶಾಸಕರು
ಶ್ರೀ ಬಿ. ಜಿ. ಪಾಟೀಲ್, ವಿಧಾನಸಭಾ ಸದಸ್ಯರು

ಶ್ರೀಮತಿ ಡಾ|| ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

ಶ್ರೀ ಸಿ. ಶ್ರೀನಿವಾಸ್
ಅಧ್ಯಕ್ಷರು, ಶ್ರೀ ಸತ್ಯ ಸಾಯಿ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್

## ಅಧ್ಯಕ್ಷತೆ:

**ಶ್ರೀ ಬಿ.ಎನ್.ನರಸಿಂಹ ಮೂರ್ತಿ,**

ಕುಲಪತಿಗಳು, ಶ್ರೀ ಸತ್ಯ ಸಾಯಿ ಯೂನಿವರ್ಸಿಟಿ ಫಾರ್ ಹ್ಯೂಮನ್ ಎಕ್ಸಲೆನ್ಸ್

## ಸ್ಥಳ:

**ಶ್ರೀ ಸತ್ಯ ಸಾಯಿ ಯೂನಿವರ್ಸಿಟಿ ಫಾರ್ ಹ್ಯೂಮನ್ಎಕ್ಸಲೆನ್ಸ್,**
ನವನಿಹಾಳ ಗ್ರಾಮ, ಓಕಳಿ ಅಂಚೆ, ಕಮಲಾಪುರ ತಾಲೂಕು,
ಕಲಬುರ್ಗಿ ಜಿಲ್ಲೆ, ಕರ್ನಾಟಕ

**RSVP - ಕಿರಣ್ ಬಿ. ಪಿ. +91 97387 74388**

## ಅದಮ್ಯ ಚೇತನದ ಬಗ್ಗೆ :

ಅದಮ್ಯ ಚೇತನ ಸಂಸ್ಥೆಯು ಬಡಮಕ್ಕಳ ಏಳಿಗೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ ಶ್ರೀಮತಿ ಗಿರಿಜಾ ಶಾಸ್ತ್ರೀ ಅವರ ಹೆಸರಿನಲ್ಲಿ ಅವರ ಸುಪುತ್ರ ಹಾಗೂ ಬೆಂಗಳೂರು ದಕ್ಷಿಣ ಕ್ಷೇತ್ರದ ಜನಪ್ರಿಯ ಸಂಸದ ಮತ್ತು ಕೇಂದ್ರ ಸಚಿವ ದಿವಂಗತ ಶ್ರೀ ಅನಂತಕುಮಾರ್ ಅವರು 1998ರಲ್ಲಿ ಆರಂಭಿಸಿದ ಒಂದು ಸ್ವಯಂಸೇವಾ ಸಂಸ್ಥೆಯಾಗಿದ್ದು, ಸಾಮಾಜಿಕ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆ.

1998 ರಲ್ಲಿ ಬಡ ಹೆಣ್ಣುಮಕ್ಕಳಿಗಾಗಿ "ಟೈಲರಿಂಗ್ ತರಗತಿ" ಆರಂಭಿಸುವ ಮೂಲಕ ಸಣ್ಣದಾಗಿ ಆರಂಭಗೊಂಡ ಸಂಸ್ಥೆಯ ಚಟುವಟಿಕೆಯು ಆನಂತರ 1999 ರಲ್ಲಿ"ಕಂಪ್ಯೂಟರ್ ತರಬೇತಿ ತರಗತಿ", ರಕ್ತದಾನಕ್ಕಾಗಿ ವಿನೂತನ ಪೋರ್ಟಲ್(www.raktadan.org) ಆರಂಭ ಮತ್ತು ಆಟ-ಪಾಠ (2001) ಮುಂತಾದ ಚಟುವಟಿಕೆಯನ್ನು ನಡೆಸುವ ಮೂಲಕ ವಿಸ್ತರಣೆಗೊಂಡು ಇದೀಗ ಅನ್ನ-ಅಕ್ಷರ-ಆರೋಗ್ಯ ಪ್ರಕಲ್ಪದ ಮುಖಾಂತರ ಹತ್ತು ಹಲವು ಚಟುವಟಿಕೆಗಳನ್ನು ನಿರಂತರವಾಗಿ ನಡೆಸುವ ಮೂಲಕ ಸಾವಿರಾರು ಬಡವರಿಗೆ ಆಧಾರಸ್ತಂಭವಾಗಿದೆ.

ಅಲ್ಲದೇ, ಗ್ರಾಮಾಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆಯ ಹಲವು ಯೋಜನೆಗಳನ್ನೂ ರೂಪಿಸಿ ಯಶಸ್ವಿಯಾಗಿ ಜಾರಿಗೆ ತರುವ ಪ್ರಯತ್ನ ನಡೆಸುತ್ತಿದೆ.
ಸರ್ಕಾರಿ ಸಹಭಾಗಿತ್ವದಲ್ಲಿ ಕರ್ನಾಟಕ ಹಾಗೂ ರಾಜಸ್ತಾನದಲ್ಲಿ 1,50,000 ಕ್ಕಿಂತ ಹೆಚ್ಚಿನ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿದೆ.

**WEBSITE:**
**https://www.adamyachetana.org/**

## ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ ಬಗ್ಗೆ :

ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ ಒಂದುದತ್ತಿ ಸಂಸ್ಥೆಯಾಗಿದ್ದು, ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಗ್ರಾಮದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದೆ. 2015 ನವೆಂಬರ್ ತಿಂಗಳಲ್ಲಿ ಒಂದು ಸ್ವಯಂ ಸೇವಾ ಸಂಸ್ಥೆಯಾಗಿ ಆರಂಭಗೊಂಡ ಟ್ರಸ್ಟ್, ಆರಂಭಿಕವಾಗಿ ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳಿಗೆ ಹಾಗೂ ಸಮಾಜದ ಹಿಂದುಳಿದ ವರ್ಗದವರಿಗಾಗಿ ಪೌಷ್ಟಿಕ ಹಾಗೂ ಸಮತೋಲನ ಉಪಾಹಾರ ನೀಡುವ ಯೋಜನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿತು. ಅಲ್ಲದೇ ಶಾಲಾ ಮಕ್ಕಳು ಮಾನವೀಯಕ್ಷಮತೆ ಮತ್ತು ಶೈಕ್ಷಣಿಕ ಸಾಮರ್ಥ್ಯವನ್ನು ಹೊಂದುವ ಮೂಲಕ ಸಮಗ್ರ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಯೋಜನೆಯನ್ನು ರೂಪಿಸುವಲ್ಲಿ ಸಹ ಮುಂದಡಿ ಇಟ್ಟಿದೆ.

ಈ ಸಂಸ್ಥೆಯ ಬಹು ಮುಖ್ಯವಾದ ಚಟುವಟಿಕೆಯಾಗಿ "ಅನ್ನಪೂರ್ಣ ಉಪಾಹಾರ ಯೋಜನೆ" ಅಡಿಯಲ್ಲಿ 600 ಕ್ಕೂ ಹೆಚ್ಚು ಸ್ವಯಂಸೇವಕರು 15 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶದಲ್ಲಿ ಇರುವ 3,000 ಕ್ಕೂ ಹೆಚ್ಚು ಶಾಲೆಯ 2,00,000 ಮಕ್ಕಳಿಗೆ ಉಚಿತವಾಗಿ ಬೆಳಗಿನ ಪೌಷ್ಟಿಕ ಆಹಾರ ನೀಡುವ ಕಾರ್ಯದಲ್ಲಿ ತೊಡಗಿಸಿ ಕೊಂಡಿರುವುದನ್ನು ಗುರುತಿಸಬಹುದಾಗಿದೆ.

ಈ ಯೋಜನೆಯು ಶಾಲೆಗಳಿಂದ ಅಭೂತಪೂರ್ವ ಸ್ವಾಗತವನ್ನು ಪಡೆಸಿರುವುದಲ್ಲದೇ, ಶಾಲೆಗಳಲ್ಲಿ ಹಾಜರಿ ಹೆಚ್ಚಾಗಲು, ಮಕ್ಕಳ ಆರೋಗ್ಯ ಸುಧಾರಿಸಲು ಹಾಗೂ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗಲು ಕಾರಣವಾಗಿದೆ.

**WEBSITE:**
**https://www.annapoorna.org.in**

# ಸಮಸ್ತ ಲೋಕ ಸುಖಿನೋ ಭವಂತು